ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಸಿ4(7)ಪ್ರಾ.ಶಿ&ಪ್ರೌ.ಶಾ.ಶಿ.ವರ್ಗ/01/2012-13 ದಿನಾಂಕ 22-05-2012

**ಸೂಚನೆ**

**ವರ್ಗಾವಣೆ ಬಯಸುವ ಪ್ರಾಥಮಿಕ ಶಾಲಾ ಶಿಕ್ಷಕರ ಗಮನಕ್ಕೆ**

1. ದಿನಾಂಕ:16.05.2012 ರಂದು ನೀಡಿದ್ದ ವೇಳಾಪಟ್ಟಿಯಂತೆ ಕೌನ್ಸಿಲಿಂಗ್ ಅನ್ನು ತಾಂತ್ರಿಕ ಕಾರಣಗಳಿಂದ ನಡೆಸಲು ಸಾಧ್ಯವಾಗುತ್ತಿಲ್ಲ.

   ಆದ್ದರಿಂದ ನಾಳೆ ಅಂದರೆ ದಿನಾಂಕ:23.05.2012 ರಂದು 1801 ರಿಂದ 2300 ಕ್ರಮಸಂಖ್ಯೆ ವರೆಗಿನ ಪ್ರಾಥಮಿಕ ಶಾಲಾ ಸಹಶಿಕ್ಷಕರು ಮಾತ್ರ ಸಂಬಂಧಿಸಿದ ವರ್ಗಾವಣೆ ಕೇಂದ್ರಗಳಿಗೆ ಹಾಜರಾಗುವಂತೆ ಸೂಚಿಸಲಾಗಿದೆ. ಮುಂದಿನ ಕ್ರಮಸಂಖ್ಯೆಯ ವಿವರಗಳನ್ನು ನಾಳೆ ಸಾಯಂಕಾಲ ಅಂದರೆ ದಿನಾಂಕ:23.05.2012 ರಂದು ಇಲಾಖೆಯ ವೆಬ್-ಸೈಟ್‌ನಲ್ಲಿ ಹಾಕಲಾಗುತ್ತದೆ.

2. ವಿವಾಹಿತ ಪ್ರಕರಣಗಳಲ್ಲಿ ಆದ್ಯತೆ ಕೋರಿ ಅರ್ಜಿ ಸಲ್ಲಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರು ಜಿಲ್ಲಾ ಜೇಷ್ಟತೆ ಹೊಂದಿದ್ದಲ್ಲಿ (ಜಿಲ್ಲಾ ಉಪನಿರ್ದೇಶಕರಿಂದ ನೇಮಕಾತಿ ಆದೇಶ ಪಡೆದವರು) ಸಂಗಾತಿ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಜಿಲ್ಲೆಯ ವ್ಯಾಪ್ತಿಯಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ. ಬ್ಲಾಕ್ ಜೇಷ್ಟತೆ ಹೊಂದಿದ್ದಲ್ಲಿ (ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ನೇಮಕಾತಿ ಆದೇಶ ಪಡೆದವರು) ಸಂಗಾತಿ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಬ್ಲಾಕ್ ವ್ಯಾಪ್ತಿಯಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ.

-ಸಹಿ-

ನಿರ್ದೇಶಕರು (ಪ್ರೌಢಶಿಕ್ಷಣ) ಹಾಗೂ
ವರ್ಗಾವಣಾ ಪ್ರಾಧಿಕಾರಿಗಳು
ಮೈಸೂರು ವಿಭಾಗ